ಮೆಟಲಿಂಗ್ ರಸ್ತೆ	145 ಕಿ.ಮೀ
ಕಚ್ಚಾ ರಸ್ತೆ	50 ಕಿ.ಮೀ.

ಅ) ಮೆಟಲಿಂಗ್ ರಸ್ತೆಯ ಡಾಂಬರೀಕರಣ ಹಾಗೂ ಡಾಂಬರ್ ರಸ್ತೆಗಳ ಪುನರಲೇಪನ ಮಾಡುವ ಕುರಿತು ಒಟ್ಟು ರೂ. 100.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಇಲ್ಲಿಯವರೆಗೆ 85.48 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ಕಚ್ಚಾ ರಸ್ತೆಗಳನ್ನು 5 ವರ್ಷಗಳ ಕಾಲಾವಧಿಯಲ್ಲಿ ಮೆಟಲಿಂಗ್ ಮಾಡಿಸಲಾಗುವುದು. ಮಹಾನಗರಪಾಲಿಕೆಯು ರೂ. 16.53 ಲಕ್ಷ ವೆಚ್ಚದಲ್ಲಿ 8.79 ಕಿ.ಮೀ ಉದ್ದಳತೆಯ ರಸ್ತೆಗಳಿಗೆ ಮೆಟಲಿಂಗ್ ಮಾಡಿಸಲಾಗಿದೆ ಅಲ್ಲದೆ ರೂ. 28.79 ಲಕ್ಷ ಅಂದಾಜು ಮೊತ್ತದ 14.59 ಕಿ.ಮೀ ಉದ್ದಳತೆ ರಸ್ತೆಗಳಿಗೆ ಮೆಟಲಿಂಗ್ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) 18. ರೂ. 7.81 ಲಕ್ಷಗಳು.

ಹುಬ್ಬಳ್ಳಿ-ಧಾರವಾಡ ನಗರ ಸಭೆಗೆ ಸಂಬಂಧಿಸಿದಂತೆ ಕೊಳವೆ ಬಾವಿಗಳನ್ನು ಜೋಡಿಸುವ ಬಗ್ಗೆ

467 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸೇರಿದ ಅವಳಿನಗರಕ್ಕೆ ಕನನೀನ ಮತ್ತು ಒಳಚರಂಡಿ ಮಂಡಳಿಯಿಂದ ಎಷ್ಟು ಕೊಳವೆ ಬಾವಿಗಳನ್ನು ಜೋಡಿಸಲಾಗಿದೆ. ಹಾಗೂ ಇವುಗಳಿಗೆ ತಗುಲಿದ ಖರ್ಚೆಷ್ಟು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸೇರಿದ ಅವಳಿನಗರಕ್ಕೆ ಕನನೀನ ಮತ್ತು ಒಳಚರಂಡಿ ಮಂಡಳಿಯಿಂದ ಇಲ್ಲಿಯವರೆಗೆ 532 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಲ್ಲಿ 520 ಫಲ ಪ್ರದವಾಗಿದ್ದು 84 ಕೊಳವೆ ಬಾವಿಗಳನ್ನು ಕೈ ಪಂಪುಗಳಿಂದಲೂ ಮತ್ತು 36 ಕೊಳವೆ ಬಾವಿಗಳನ್ನು ವಿದ್ಯುತ್ ಪಂಪಗಳಿಂದಲೂ ಜೋಡಿಸಲಾಗಿದೆ. ಇವುಗಳಿಗೆ ಸುಮಾರು ರೂ. 230.28 ಲಕ್ಷ ಖರ್ಚಾಗಿದೆ.

ರಾಜ್ಯದಲ್ಲಿ ಚರ್ಮೋದ್ಯಮಕ್ಕೆ ಖರ್ಚಾದ ಹಣ

468 - ಶ್ರೀ ಅಶೋಕ ಎಸ್. ಕಾಟವೆ(ಹುಬ್ಬಳ್ಳಿನಗರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಚರ್ಮೋದ್ಯಮಕ್ಕಕಿ 1992 ರಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಪ್ರಸ್ತುತ ವರ್ಷ ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ? ಚರ್ಮೋದ್ಯಮದಲ್ಲಿ ಎಷ್ಟು ಜನ ಕಾರ್ಯ ನಿರ್ವಹಿಸುತ್ತಿರುವರು (ಜಿಲ್ಲಾವಾರು ಮಾಹಿತಿ ನೀಡುವುದು).

ಇ) ಧಾರವಾಡ ಜಿಲ್ಲೆಯಲ್ಲಿ ಚರ್ಮ ಹದ ಮಾಡುವುದಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಕೈಗೊಂಡಲ್ಲಿ ಖಾಸಗಿ ಹಾಗೂ ಸರ್ಕಾರಿ ಘಟಕಗಳು ಎಷ್ಟು? ಇವುಗಳಲ್ಲಿ ಎಷ್ಟು ಜನ ಕಾರ್ಯ ನಿರ್ವಹಿಸುತ್ತಿರುವರು? ಸರ್ಕಾರದವರು ಎಷ್ಟು ಹಣ ನಿಗಧಿ ಮಾಡಿರುವರು?

ಈ) ಧಾರವಾಡ ಜಿಲ್ಲೆಯಲ್ಲಿ ಹದವಾದಂತ ಚರ್ಮ ಉತ್ಪಾದನೆ ಪ್ರಸ್ತುತ ವರ್ಷ ಎಷ್ಟು? ಈ ಚರ್ಮ ಮುಂದೆ ಯಾವ ರೀತಿ ಉಪಯೋಗಿಸಲಾಗುವುದು?

ಶ್ರೀ ಎನ್. ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ರೂ. 169.00 ಲಕ್ಷಗಳು

ಆ) ರೂ. 51.00 ಲಕ್ಷಗಳು

ರಾಜ್ಯದಲ್ಲಿ ಅಂದಾಜು, 1.25 ಲಕ್ಷ ಚರ್ಮ ಕುಶಲ ಕರ್ಮಿಗಳು ಇರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಸಂಗ್ರಹಿಸಿ ಒದಗಿಸಲಾಗುತ್ತದೆ.

ಇ) 1986ರಲ್ಲಿ ಧಾರವಾಡ ಜಿಲ್ಲೆ, ಲಕ್ಷ್ಮನಹಳ್ಳಿಯಲ್ಲಿ ಡಚ್ ನೆರವು ಕರ್ನಾಟಕ ಕೈಗಾರಿಕಾ ಮಳಿಗೆ ಯೋಜನೆಯಡಿಯಲ್ಲಿ ಘಟಕವನ್ನು ನಿರ್ಮಿಸಲಾಗಿದೆ. ಅಲ್ಲಿ ಚರ್ಮ ಹದ ಮಾಡುವವರ ಅನುಕೂಲಕ್ಕಾಗಿ ಈ ಕೆಳಕಂಡ ಸವಲತ್ತುಗಳನ್ನು ಒದಗಿಸಲಾಗಿದೆ.

	ಸಂಖ್ಯೆಗಳಲ್ಲಿ
ಮನೆಗಳು	30
ಚರ್ಮಹದಮಾಡುವ ಗುಣಿಗಳು	30
ಸಾಮಾನ್ಯ ಕಾರ್ಯಾಗಾರಗಳು	02
ಕೊಳಚೆ ನಿರ್ಮೂಲನಾ ಘಟಕ	01

30 ಕುಶಲಕರ್ಮಿಗಳಿದ್ದು ಅವರುಗಳು ಡಚ್ ನೆರವಿನ ಯೋಜನೆಯ ಫಲಾನುಭವಿಗಳಾಗಿದ್ದು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಡಚ್ ನೆರವಿನಡಿಯಲ್ಲಿನ ಯೋಜನೆಯನ್ನು ಹೊರತಪಡಿಸಿ ಖಾಸಗಿ ಚರ್ಮ ಹೆದ ಮಾಡುವವರು ಇರುವುದಿಲ್ಲ. ಮತ್ತು ಚರ್ಮ ಹದ ಮಾಡುವ ಉದ್ದೇಶಕ್ಕಾಗಿ ಈ ಜಿಲ್ಲೆಗೆ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಹಣ ನಿಗದಿಪಡಿಸಿರುವುದಿಲ್ಲ.

ಈ) ಸುಮಾರು ನೂರು ಪ್ರತ್ಯೇಕ ಕುಶಲಕರ್ಮಿಗಳು ಚರ್ಮ ಹದ ಮಾಡುವ ಕಾರ್ಯದಲ್ಲಿ ನಿರತರಾಗಿದ್ದು, ತಿಂಗಳಿಗೆ ಸುಮಾರು 3000 ಕೆ.ಜಿ.ಗಳಷ್ಟು ಧೋರ್ ಚರ್ಮವನ್ನು ಉತ್ಪಾದಿಸುತ್ತಿದ್ದು, ಈ ಚರ್ಮವನ್ನು ಮುಖ್ಯವಾಗಿ ಪಾದರಕ್ಷೆಗಳು ಹಾಗೂ ರೈತರು ಉಪಯೋಗಿಸುವ ಉಪಯುಕ್ತ ವಸ್ತುಗಳನ್ನು ತಯಾರು ಮಾಡುವ ಸಲುವಾಗಿ ಉಪಯೋಗಿಸಲಾಗುತ್ತಿದೆ.

ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರಮಾಣ

469 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಕಬ್ಬು ಬೆಳೆಯುವ ಪ್ರಮಾಣ ಎಷ್ಟು? ರಾಜ್ಯದಲ್ಲಿ ಉತ್ಪಾದಿಸುವ ಕಬ್ಬು (ಬೆಳೆಯುವ ಕಬ್ಬು) ಎಷ್ಟು? ರಾಜ್ಯದಲ್ಲಿ ಖಾಸಗಿ/ಸಹಕಾರಿ ಮತ್ತು ಸರಕಾರಿ ಸ್ಥಕ್ಕರೆ ಕಾರ್ಖಾನೆಗಳೆಷ್ಟು? ರೈತರು ಬೆಳೆದ ಕಬ್ಬಿನಲ್ಲಿ ಎಷ್ಟು ಪ್ರತಿಶತ ಕಬ್ಬನ್ನು ಅರೆಯುವ ಸಾಮರ್ಥ್ಯವಿದೆ. ಮಿಕ್ಕಿದ ಕಬ್ಬನ್ನು ಯಾವ ರೀತಿಯಲ್ಲಿ ಉಪಯೋಗಿಸಲು ಸರ್ಕಾರ ಯೋಜಿಸಿದೆ?

ಆ) ಹೊರ ರಾಜ್ಯಗಳ ಸಾಗಾಟ ನಿಷೇದದಿಂದ ಧಾರವಾಡ ಜಿಲ್ಲೆ ಮತ್ತು ಬೆಳಗಾಂನ ಜಿಲ್ಲಾ ರೈತರು ಹಾನಿಗೆ ಈಡಾಡುವುದಕ್ಕೆ ಸರ್ಕಾರದ ಅಭಿಪ್ರಾಯವೇನು? 1995-96ನೇ ಪ್ರಸಕ್ತ ಸಾಲಿನಲ್ಲಿ ರೈತರಿಗೆ ಎಷ್ಟು ಲಕ್ಷ ನಷ್ಟವಾಗಿದೆ? ಈ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ? ನಡೆಸಿದ್ದಲ್ಲಿ ಇದರ ಬಗ್ಗೆ ಸರ್ಕಾರದ ಉಪ ಕ್ರಮವೇನು?.

ಇ) ರಾಜ್ಯದಲ್ಲಿ ರೈತರು ಬೆಳೆದ ಕಬ್ಬು ನುರಿಸಲು ಸದ್ಯ ಇರುವ ಸಕ್ಕರೆ ಗಿರಿಣಿಗಳು ಸಾಕಾಗಲಾರವು ಎಂಬುದಕ್ಕೆ ಸರ್ಕಾರದ ಸ್ಪಷ್ಟ ಹೇಳಿಕೆ ಏನು? ಸಾಕಾಗಲಾರವು ಎಂಬ ನಿಲುವು ನಿಮ್ಮದು ಆದಲ್ಲ ಹೊಸದಾಗಿ ಸಕ್ಕರೆ ಗಿರಣಿಗಳನ್ನು ಸ್ಥಾಪಿಸಿರುವರೋ, ಹೇಗೆ? ಸ್ಥಾಪಿಸಲು ಮುಂದೆ ಬಂದಲ್ಲಿ ಅನುಮತಿ ನೀಡಲಾಗುವುದೆ? ಈ ಬಗ್ಗೆ ಬಂದಂತ ಅರ್ಜಿಗಳ ವಿವರ ನೀಡುವುದು.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ಕಬ್ಬು ಬೆಳೆಯುವ ಪ್ರಮಾಣದ ಅಂದಾಜಿನ ವಿವರವನ್ನು ಅಡಕ-ಅ ದಲ್ಲಿ ನೀಡಲಾಗಿದೆ. ರಾಜ್ಯದಲ್ಲಿ 1995-96ರ ಸಾಲಿನಲ್ಲಿ ಸುಮಾರು 214.40 ಲಕ್ಷ ಟನ್ ಕಬ್ಬು ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ 17 ಜಂಟಿ ಕ್ಷೇತ್ರದಲ್ಲಿ 2, ಸಾರ್ವಜನಿಕ ಕ್ಷೇತ್ರದಲ್ಲಿ 2 ಹಾಗೂ ಖಾಸಗಿ ಕ್ಷೇತ್ರದಲ್ಲಿ 9 ಸಕ್ಕರೆ ಕಾರ್ಖಾನೆಗಳಿರುತ್ತವೆ. ಪ್ರಸ್ತುತ ರೈತರು ಬೆಳೆದ ಕಬ್ಬಿನಲ್ಲಿ ಸುಮಾರು ಶೇ. 58ರಷ್ಟು ಕಬ್ಬನ್ನು ಕಾರ್ಖಾನೆಗಳು ಅರೆಯಲು ಸಾಮರ್ಥ್ಯ ಪಡೆದಿರುತ್ತವೆ. ಉಳಿದ ಕಬ್ಬಿನಲ್ಲಿ ಕಬ್ಬಿನ ನಾಟಿಗಾಗಿ,